# ಸಹಜ ನಟಿ

'ನೀವು ಬಿಸ್ಲೇರಿ ನೀರಿನಲ್ಲಿ ಸ್ನಾನ ಮಾಡ್ತೀರಂತೆ, ಹೌದಾ?', 'ನಿಮ್ಮ ಮನೆ ನಾಯಿ ಬಣ್ಣ ಬದಲಾದದ್ದು ನಿಜವೇ?', 'ಸ್ಟಾರ್ ಹೋಟೆಲ್‌ನಲ್ಲೇ ಯಾಕೆ ಅಷ್ಟು ಕಾಲ ವಾಸ ಮಾಡಿದ್ದು, ಬೆಂಗಳೂರಲ್ಲಿ ಒಳ್ಳೆ ಮನೆ ಸಿಗಲಿಲ್ಲವೇ?'– ಇಂಥ ಅಸಂಖ್ಯ ಪ್ರಶ್ನೆಗಳನ್ನು ಎದುರಿಸುವಂಥ ಪರಿಸ್ಥಿತಿ ಸೃಷ್ಟಿಸಿಕೊಂಡ ನಟಿ ಅಷ್ಟೇನೂ ಎತ್ತರವಿಲ್ಲ. ಕನ್ನಡದ ನೀಳಕಾಯದ ನಟನ ಪಕ್ಕ ನಿಂತು ಫೋಟೊ ತೆಗೆಸಿಕೊಳ್ಳುವಾಗ ಅವರು ಕುರ್ಚಿ ಮೇಲೆ ನಿಂತಿದ್ದನ್ನು ಕಂಡು ನಕ್ಕವರಿದ್ದಾರೆ. 'ಫಿಸಿಕಲ್ ಹೈಟ್ ಮುಖ್ಯ ಅಲ್ಲ, ಮೆಂಟಲ್ ಹೈಟ್ ಮುಖ್ಯ' ಎಂದು ನಗೆಯಾಡಿದ್ದವರನ್ನೇ ಮಾತಿನಿಂದ ಚುಚ್ಚಿದ್ದ ಚೂಪು ಮೂಗಿನ ನಟಿ ಅವರು.

ಕನ್ನಡದಲ್ಲಿ ನಾಯಕನನ್ನು ಅಪ್ಪಿಕೊಳ್ಳಲೂ ಹಿಂದುಮುಂದು ನೋಡುತ್ತಿದ್ದ ನಟಿ ತಮಿಳು ಚಿತ್ರಕ್ಕೆ ಚಂಗನೆ ಜಿಗಿದರು. ಕೃಷ್ಣವರ್ಣದ ನಾಯಕ ಕಡಲ ತಟದ ಮರಳ ಮೇಲೆ ಎಳೆದಾಡಿದ್ದನ್ನು ಸಹಿಸಿಕೊಂಡರು. ಕೆನ್ನೆಗೆ ಕೆನ್ನೆ ಸೋಕಿಸಿದಾಗ ಪುಳಕಿತ ಭಾವ ಹೊಮ್ಮಿಸಿದರು. ಬಾಲಿವುಡ್‌ನ ಕಟ್ಟುಮಸ್ತು ದೇಹದ ನಾಯಕ ಕನ್ನಡದ ರೀಮೇಕ್ ಚಿತ್ರದಲ್ಲಿ ಅಭಿನಯಿಸಿದಾಗಲಂತೂ ತುಟಿಮುತ್ತಿಗೇ ಒಡ್ಡಿಕೊಂಡರು. 'ಕನ್ನಡದಲ್ಲಿ ಒಬ್ಬ ಸುರಸುಂದರಿ ನಾಯಕಿ ಇದ್ದಾಳೆ ಅಂತ ಅವನು ಮುಂಬೈನಲ್ಲಿ ಹೇಳುತ್ತಿದ್ದಾನಂತೆ' ಎಂದು ತಾವೇ ಆಪ್ತ ಸುದ್ದಿಮಿತ್ರೆಗೆ ಫೋನ್ ಮಾಡಿ, ತಮ್ಮದೇ ಸುದ್ದಿಯನ್ನು ಕೊಟ್ಟಿದ್ದರು. ಸುದ್ದಿಯನ್ನು ಯಾರಿಗೆ, ಯಾವಾಗ, ಹೇಗೆ, ಎಷ್ಟು ಕೊಡಬೇಕು ಎಂಬುದರಲ್ಲಿ ಅವರು ನಿಷ್ಣಾತೆ.

ಒಂದು ಶಾಟ್ ಮುಗಿದ ತಕ್ಷಣ ಮಾನಿಟರ್‌ನಲ್ಲಿ ತಮ್ಮ ಮುಖ ಹೇಗೆ ಕಾಣುತ್ತದೆ ಎಂಬುದನ್ನು ಖಾತರಿಪಡಿಸಿಕೊಂಡೇ ಮುಂದಿನ ಶಾಟ್‌ಗೆ ಅಣಿಯಾಗುವುದು ಜಾಯಮಾನ. ಒಮ್ಮೆ ನೃತ್ಯದ ಶಾಟ್ ಒಂದರಲ್ಲಿ ಕೂದಲು ಮುಖಭಾಗವನ್ನು ಕೊಂಚ ಮುಚ್ಚಿತ್ತು. ನಿರ್ದೇಶಕ ಕಂ ನಾಯಕನಿಗೆ ಅದು ಸಹಜವಾಗಿದೆ ಎಂಬ ಭಾವನೆ. ಈ ನಟಿಯದ್ದು ಅದು ಸರಿ ಇಲ್ಲ ಎಂಬ ವಾದ. ಮಾತ್ ಮಾತಲ್ಲಿ ಏನೇನೋ ಹೊಮ್ಮಿ, ಕೊನೆಗೆ ಇಂಗ್ಲಿಷ್‌ನಲ್ಲಿ ಅವಾಚ್ಯ ಶಬ್ದವನ್ನೇ ಹೊರಡಿಸಿಬಿಟ್ಟರು ಈ ನಟೀಮಣಿ. ತಮ್ಮ ಎತ್ತರಕ್ಕೆ ತಕ್ಕಂತೆ ಪ್ರತಿಷ್ಠೆಯನ್ನು ನೇವರಿಸುತ್ತಾ ಬಂದಿರುವ ನಾಯಕ ಆ ಮಾತನ್ನು ಸಹಿಸಲಿಲ್ಲ. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಗೆ ದೂರು ಕೊಟ್ಟರು. ಅಲ್ಲಿನ ಪಂಚಾಯಿತಿ ಕಟ್ಟೆಗೆ ನಟೀಮಣಿಯನ್ನು ಕರೆಸಲಾಯಿತು. ಕೋಪಾವೇಶದಲ್ಲಿ ಬೈಯ್ದಿದ್ದ ನಟಿ ಅಲ್ಲಿ ನಗುನಗುತ್ತಲೇ ಬಂದರು. ಕ್ಷಮೆಯನ್ನೇನೂ ಕೇಳಲಿಲ್ಲ. ನಗುವಿನಂತೆ ಮಾತನ್ನೂ ತೇಲಿಸಿದರು. ಆ ನಾಯಕ ಸ್ಕ್ರಿಪ್ಟನ್ನೇ ಕೊಂಚ ಮಾರ್ಪಾಟು ಮಾಡಿಕೊಂಡು ಸಿನಿಮಾ ಮುಗಿಸಿದರು.

ಏನೇ ಕಿರಿಕಿರಿ ಪಿರಿಪಿರಿಗಳಾದರೂ ನಟಿಯ ವರ್ಚಸ್ಸು, ತಾರಾಮೌಲ್ಯ ಕಡಿಮೆಯಾಗಲಿಲ್ಲ. ಒಂದು ಕಾಲನ್ನು ರಾಜಕೀಯ ಕ್ಷೇತ್ರದಲ್ಲೂ ಇಟ್ಟಿರುವ ಅವರು ತಾರಾ ಹೋಟೆಲ್‌ನ ಹಂಗು ತೊರೆದು, ಬೆಂಗಳೂರಿನ ಪ್ರತಿಷ್ಠಿತ ಪ್ರದೇಶದಲ್ಲಿ ತಮ್ಮದೇ ಮನೆ ಮಾಡಿಕೊಂಡರು. ಸದ್ಯಕ್ಕೆ ಕನ್ನಡದಲ್ಲಿ ಅತಿಹೆಚ್ಚು ಸಂಭಾವನೆ ಪಡೆಯುತ್ತಿರುವ ಅವರು ಸ್ಕ್ರಿಪ್ಟ್ ತಿದ್ದಲು ಒಪ್ಪದ ನಿರ್ದೇಶಕನ ಚಿತ್ರಕ್ಕೇ ದೋಸೆ ಹೊಯ್ದಿದ್ದಾರೆ!

-ಎನ್ವಿ

Printed and Published by S.V. Srinivasan on behalf of **The Printers (Mysore) Private Ltd.** Printed at M/s. Rajhans Enterprises, no. 134, 4th main road, Industrial Town, Rajajinagar, Bangalore - 560044. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: **K.N. SHANTH KUMAR.**

Editorial Office: 75, M.G Road, Bangalore-560 001 E-mail:editormy@deccanherald.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited.RNI No 17129/68